# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 31-3-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಜೋಳ ದರ ಸದ್ಯ ಹೆಚ್ಚಳವಿರುವ ಸಾಧ್ಯತೆ

ರಾಬಿ ಬೆಳೆಯ ಕೊನೆಯ ಹಂತದಲ್ಲಿ ಬಂದ ಅಕಾಲಿಕ ಮಳೆಯಿಂದ ಬೆಳೆಯ ಉತ್ಪಾದನೆ ಬಾಧಿತವಾಗಿರುವ ಶಂಕೆಯಿದೆ. ಹಾಗೂ ಈಗಾಗಲೇ ಹೊಸ ಬೆಳೆಯ ಆವಕ ಪ್ರಮಾಣ ಕಡಿಮೆಯಾಗಿದ್ದು ಸದ್ಯ ದರ ಹೆಚ್ಚಳದಲ್ಲೇ ಮುಂದುವರಿಯುವ ಸಾಧ್ಯತೆಯಿದೆ.

## ಖಾದ್ಯ ತೈಲ ಆಮದಿಗೆ ಮುಕ್ತ ಪರವಾನಗಿ, ದಾಸ್ತಾನು ಮಿತಿ ಮುಂದುವರಿಕೆ

ಖಾದ್ಯ ತೈಲ ದಾಸ್ತಾನು ಮಿತಿ ಹೇರಿಕೆ ಆರು ತಿಂಗಳು, ಮುಂದಿನ ಡಿಸೆಂಬರ್ ತನಕ ಮುಂದುವರಿಸಿದ್ದು ಅಕ್ರಮ ದಾಸ್ತಾನು ಹೊಂದುವುದನ್ನು ತಡೆಯಲಾಗುತ್ತಿದೆ. ಡಿಸೆಂಬರ್ 2022 ರ ತನಕ ಮುಕ್ತ ಪರವಾನಗೆಯನ್ವಯ ಖಾದ್ಯ ತೈಲ (ರಿಫೈಂಡ್ ಪಾಮೆಣ್ಣೆ) ಆಮದು ಮಾಡಬಹುದಾಗಿದೆ. ದೇಶೀ ಮಾರುಕಟ್ಟೆಯಲ್ಲಿ ಖಾದ್ಯ ತೈಲ ಲಭ್ಯತೆ ಉತ್ತಮಪಡಿಸಲು ಸರಕಾರ ಆಮದಿಗೆ ಮುಕ್ತ ಪರವಾನಗೆಯನ್ವಯ ಅವಕಾಶ ನೀಡಿದೆ.